ಮಾರುಕಟ್ಟೆಗೆ ಲಗ್ಗೆಯಿಟ್ಟ ಪಟಾಕಿ ಅಬ್ಬರ

ಉದಯಕಾಲ ನ್ಯೂಸ್, ಮೈಸೂರು: ನಾಳೆಯಿಂದ ಮೂರು ದಿನಗಳು ಬೆಳಕಿನ ಹಬ್ಬ ದೀಪಾವಳಿ ಇರುವುದರಿಂದ ಮೈಸೂರು ನಗರದಾದ್ಯಂತ ಹಲವಾರು ಸ್ಥಳಗಳಲ್ಲಿ ನೂರಾರು ಪಟಾಕಿ ಮಳಿಗೆಗಳು ತಲೆಯೆತ್ತಿವೆ.

ಮೈಸೂರಿನ ಹೃದಯ ಭಾಗವಾದ ಜೆ.ಕೆ. ಮೈದಾನದಲ್ಲಿ 19 ಮಳಿಗೆಗಳು, ಲಲಿತ ಮಹಲ್ ಪ್ಯಾಲೇಸ್ ಮೈದಾನದಲ್ಲಿ 11 ಮಳಿಗೆಗಳು, ಹೆಬ್ಬಾಳ್ ಭಾಗದಲ್ಲಿ 10 ಮಳಿಗೆಗಳು, ಚಾಮುಂಡಿ ಪುರಂ ಜೆ.ಪಿ. ನಗರ ಗಾಂಧಿನಗರ ಸೇರಿದಂತೆ ನೂರಕ್ಕೂ ಹೆಚ್ಚು ಪಟಾಕಿ ಮಳಿಗೆಗಳು ತೆರೆದಿದೆ. ನಿನ್ನೆಯಿಂದಲೇ ಎಲ್ಲಾ ಮಲಗಿದಾರರು ವ್ಯಾಪಾರವನ್ನು ಆರಂಭಿಸಿದ್ದಾರೆ

ಮೈಸೂರಿನ ರೈಲು ನಿಲ್ದಾಣ ಬಳಿ ಇರುವ ಜೆ.ಕೆ. ಮೈದಾನದಲ್ಲಿ 19 ಮಳಿಗೆಗಳು ಇದ್ದು ಐದು ದಿನಗಳವರೆಗೆ ವ್ಯಾಪಾರ ವಹಿವಾಟು ನಡೆಯಲಿದೆ, ಇದಕ್ಕೆ ದಿನಕ್ಕೆ ಇಂತಿಷ್ಟು ಎಂಬಂತೆ ಐದು ದಿನಗಳವರೆಗೆ ಮೆಡಿಕಲ್ ಅಸೋಸಿಯೇಷನ್ ಅವರಿಗೆ ಯಾಕೆ ಮಲಗಿದಾರರು ನೀಡಬೇಕಾಗಿರುತ್ತದೆ. ಪರಿಸರ ಇಲಾಖೆ, ಅಗ್ನಿ ಶಾಮಕದಳ ಮತ್ತು ನಗರ ಪಾಲಿಕೆಯಿಂದ ಅನುಮತಿ ಪಡೆಯಲು, ಪೊಲೀಸ್ನವರಿಂದ ಅನುಮತಿ ಪಡೆಯಲು, ಅಗ್ನಿಶಾಮಕ ದಳ, ಪೊಲೀಸ್ ಭದ್ರತೆ ವಿದ್ಯುತ್ ಇಲಾಖೆಯ ಶುಲ್ಕ ಹಾಗೂ ಇತರೆ ಸೇವಾ ಕಾರ್ಯಗಳಿಗೆ ಸಂಬಂಧಿಸಿದಂತೆ ಸುಮಾರು 1.50 ಲಕ್ಷ ರೂ ವರೆಗೆ ಖರ್ಚು ಮಾಡಲಾಗಿದೆ, ಪಟಾಕಿ ಅಸೋಸಿಯೇಷನ್ ಸಂಘದ ವತಿಯಿಂದ ಸಂಘದ ಅಧ್ಯಕ್ಷ ನರವೀ ಗೌಡ ಅವರ ನೇತೃತ್ವದಲ್ಲಿ



ಪಟಾಕಿ ಮಳಿಗೆಗಳನ್ನು ಸ್ಥಾಪಿಸಲಾಗಿದ್ದು, ನಮ್ಮ ಸಂಘವು ಜೆ. ಕೆ. ಮೈದಾನದ ಬಾಡಿಗೆಯನ್ನು ಮೆಡಿಕಲ್ ಅಸೋಸಿಯೇಷನ್ ಗೆ ಸಲ್ಲಿಸಲಾಗುತ್ತದೆ ಎಂದು ಪಟಾಕಿ ಮಳಿಗೆಯ ಮಾಲೀಕ ಶರತ್ ಎಸ್. ತಿಳಿಸಿದರು.

ಇತರ ಭಾಗಗಳಲ್ಲಿ ತೆರೆದಿರುವ ಪಟಾಕಿ ಮಳಿಗೆಗಳ ಬಾಡಿಗೆಯನ್ನು ನಗರಪಾಲಿಕೆ ವಿಧಿಸಿದ ದರಕ್ಕೆ ಅನುಸಾರವಾಗಿ ಕಟ್ಟಲಾಗಿದೆ, ಆ ಸ್ಥಳಗಳಲ್ಲಿಯೂ ತಲಾ ಒಂದೊಂದು ಮಳಿಗೆಗೆ 2ರಿಂದ 3 ಲಕ್ಷದವರೆಗೆ ವೆಚ್ಚ ತಗುಲಲಿದೆ, ವರ್ಷದಿಂದ ವರ್ಷಕ್ಕೆ ಬಾಡಿಗೆ ವೆಚ್ಚ ಹೆಚ್ಚಾಗುತ್ತದೆ ಆದರೆ ಎದೆಗುಂದದೆ

> ‘ ಕಳೆದ ಬಾರಿ ಮಳೆ ಕಾರಣದಿಂದ ವ್ಯಾಪಾರ ಕಡಿಮೆ ಆಗಿತ್ತು ಬಾರಿ ಹೆಚ್ಚಾಗುವ ನಿರೀಕ್ಷೆಯಿದೆ. ಹೆಚ್ಚಾಗಿ ಹಿಂದೂಗಳು ಪಟಾಕಿ ಖರೀದಿ ಹಬ್ಬ ಆಚರಿಸಬೇಕು. ಹಿಂದೂಗಳಲ್ಲದವರೂ ಪಟಾಕಿ ಖರೀದಿಸುತ್ತಿದ್ದು ಅವರಿಗೆ ಅಭಾರಿಯಾಗಿದ್ದೇವೆ. ಅಂತೆಯೇ ಇಲಾಖೆಯವರು ಒಂದೆಡೆ ಜಾಗ ನೀಡಿ ಹೊರ ಭಾಗದಲ್ಲಿಯೂ ಹೆಚ್ಚಿನ ಮಳಿಗೆ ನಿರ್ಮಾಣಕ್ಕೆ ಅವಕಾಶ ಕೊಡುವುದು ಸರಿಯಲ್ಲ, ಎಲ್ಲರೂ ಹೆಚ್ಚೆಚ್ಚು ಪರಿಸರ ಸ್ನೇಹಿ ಪಟಾಕಿಯೊಂದಿಗೆ ಹಬ್ಬ ಆಚರಿಸೋಣ.
>
> – ಮರವೇಗೌಡ, ಪಟಾಕಿ ಸಂಘದ ಅಧ್ಯಕ್ಷ.

ಪಟಾಕಿ ಮಳಿಗೆಗಳ ಮಾಲೀಕರುಗಳು ಜನರ ಸಂತೋಷಕ್ಕಾಗಿ ತಮಿಳುನಾಡಿನ ಶಿವಕಾಶಿ ಸೇರಿದಂತೆ ಭಾಗಗಳಿಂದ ವಿಧವಾದ ಪಟಾಕಿಗಳನ್ನು, ಪರಿಸರಕ್ಕೆ ಹಾನಿಯಾಗದ, ಹೆಚ್ಚು ಶಬ್ದ ಬಾರದ ಪಟಾಕಿಗಳನ್ನು ತರಿಸಿ ಮಾರಾಟ ಮಾಡಲಾಗುತ್ತದೆ, ಪಾಲಿಕೆಯವರು ಹಾಗೂ ಸರ್ಕಾರದ, ಪೊಲೀಸರ ನಿರ್ದೇಶನದಂತೆ ಪಟಾಕಿ ಮಳಿಗೆ ಮಾರಾಟಗಾರರು ಮಾರಾಟ ಮಾಡುತ್ತಾರೆ ಎಂದು ಹೇಳಿದರು.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪಟಾಕಿಗಳನ್ನು ಖರೀದಿಸಿ ಮನೆಮನೆಗಳಲ್ಲಿ ದೀಪ ಬೆಳಗಿಸಿ ಸಂತೋಷದಿಂದ ಬೆಳಕಿನ ಹಬ್ಬ ದೀಪಾವಳಿ ಆಚರಿಸಲಿ ಎಂದು ಹೇಳಿದರು.

ಸೇನೆ, ಸಮವಸ್ತ್ರ ಸೇವೆಗಳಿಗೆ ಹಿಂದುಳಿದ ವರ್ಗದ ಯುವಕರಿಗೆ ಉಚಿತ ತರಬೇತಿ

ಮೈಸೂರು: ಭಾರತೀಯ ಸೇನೆ/ ಇತರೆ ಯೂನಿ ಫಾರ್ಮ್ ಸೇವೆಗಳಿಗೆ ಸೇರ ಬಯಸುವ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1, 2(ಎ), 3(ಎ), ಹಾಗೂ 3(ಬಿ)ಗಳ ಅರ್ಹ ಅಭ್ಯರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿಯನ್ನು ಉಚಿತವಾಗಿ ನೀಡುತ್ತಿದ್ದು, ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಭ್ಯರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿದ್ದು, ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ 3ಬಿ ಸೇರಿರಬೇಕು. ಅಭ್ಯರ್ಥಿ ಮತ್ತು ಕುಟುಂಬದ ಒಟ್ಟು ಗರಿಷ್ಠ ವಾರ್ಷಿಕ ಆದಾಯ ಮಿತಿ ಪ್ರವರ್ಗ-1 ಕ್ಕೆ ರೂ.2.50 ಲಕ್ಷಗಳು ಮತ್ತು ಪ್ರವರ್ಗ-2(ಎ), 3(ಎ) ಮತ್ತು 3(ಬಿ) ಗಳಿಗೆ ರೂ.1.00 ಲಕ್ಷದೊಳಗಿರಬೇಕು . ಅಭ್ಯರ್ಥಿಯ ಕನಿಷ್ಠ ವಿದ್ಯಾರ್ಹತೆ- 10ನೇ ತರಗತಿಯನ್ನು ಉತ್ತೀರ್ಣವಾಗಿದ್ದು, ಅಭ್ಯರ್ಥಿಯು ದಿನಾಂಕ:16-11-2006 ರಿಂದ 16-11-2009ರ ನಡುವಿನ ಅವಧಿಯಲ್ಲಿ ಜನಿಸಿರಬೇಕು. ಆಸಕ್ತ ಅಭ್ಯಾರ್ಥಿಗಳು ನವೆಂಬರ್ 16 ರೊಳಗೆ ಅರ್ಜಿ ನಮೂನೆ ಆಯಾ ಜಿಲ್ಲೆಯ ಜಿಲ್ಲಾ/ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಯಿಂದ ಪಡೆದು ಭರ್ತಿ ಮಾಡಿ ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಬೆಳಗಾವಿ, ಕೊಠಡಿ ಸಂಖ್ಯೆ 204, 2ನೇ ಮಹಡಿ, ಸುವರ್ಣ ವಿಧಾನಸೌಧ, ಹಲಗಾ, ಬೆಳಗಾವಿ-590010 ವಿಳಾಸಕ್ಕೆ ಕಳುಹಿಸಬಹುದಾಗಿದೆ. ಅರ್ಹ ಅಭ್ಯರ್ಥಿಗಳು ರ?ಯಾಲಿಯಲ್ಲಿ ಮೂಲ ದಾಖಲೆಗಳೊಂದಿಗೆ (10ನೇ ತರಗತಿ ಅಂಕಪಟ್ಟಿ, ಆಧಾರ ಕಾಡ್ ರ್, ಜಾತಿ ಆದಾಯ ಪ್ರಮಾಣ ಪತ್ರ) ಭಾಗವಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ. ಸಂ 0831-2407221 ನ್ನು ಸಂಪರ್ಕಿಸಬಹುದೆಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲೋಕಾಯುಕ್ತದಿಂದ ಸಾರ್ವಜನಿಕ ದೂರು ಸ್ವೀಕಾರ ಸಭೆ

ಮೈಸೂರು: ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಅಧಿಕಾರಿಗಳು ಸಾರ್ವಜನಿಕರ ಕುಂದುಕೊರತೆಗಳನ್ನು ಸ್ವೀಕರಿಸಲು ಹೆಚ್.ಡಿ. ಕೋಟೆ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ನವೆಂಬರ್ 12 ರಂದು ಬೆಳಿಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 1:00 ಗಂಟೆಯವರೆಗೆ ಸಭೆಯನ್ನು ಹಮ್ಮಿಕೊಂಡಿದ್ದಾರೆ.

ಸಾರ್ವಜನಿಕರ ಅಧಿಕೃತ ಕೆಲಸಗಳಲ್ಲಿ ಅನಗತ್ಯ ವಿಳಂಬ ಮತ್ತು ಲಂಚದ ಬೇಡಿಕೆ ಮುಂತಾದ ತೊಂದರೆಗಳನ್ನು ನೀಡುತ್ತಿರುವ ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಅಡಿಯಲ್ಲಿ ನಮೂನೆ 01 ಮತ್ತು 02 ರಲ್ಲಿ ಪ್ರಮಾಣಪತ್ರಗಳು ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ದೂರುಗಳನ್ನು ಸಲ್ಲಿಸಬಹುದಾಗಿದೆ. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಮೈಸೂರು ಪೊಲೀಸ್ ಅದೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೀಪಾವಳಿ ಪಟಾಕಿ ಮಳಿಗೆಗಳಲ್ಲಿ 18 ವರ್ಷದೊಳಗಿನ ಮಕ್ಕಳ ದುಡಿಮೆ ನಿಷೇಧ: ಉಲ್ಲಂಘಿಸಿದರೆ ಕಾನೂನು ಕ್ರಮ

ಮಂಡ್ಯ:ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಮಕ್ಕಳ ದುಡಿಮೆಯನ್ನು ನಿಯಂತ್ರಿಸಲು ಹಾಗೂ ನಿಷೇಧಿಸಲು ಬಾಲ್ಯಾವಸ್ಥೆ ಮತ್ತು ಕಿಶೋರವ್ಯಸ್ಥೆ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ 1986 ತಿದ್ದುಪಡಿ 2016 ರನ್ನು ಜಾರಿಗೆ ತಂದಿರುತ್ತದೆ. ಸದರಿ ಕಾಯ್ದೆಯನ್ವಯ ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಹಾಗೂ 14 ರಿಂದ 18 ರ ವಯಸ್ಸಿನ ಕಿಶೋರ ಕಾರ್ಮಿಕ ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ.

ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ದೀಪಾವಳಿ ಹಬ್ಬದಪ್ರಯುಕ್ತ ಪಟಾಕಿ ಮಾರಟ ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದೆ. ಪಟಾಕಿ ತಯಾರಿಕೆ ಮಾರಟ ಹಾಗೂ ಇತರೆ ಪ್ರಕ್ರಿಯೆಗಳು ಅಪಾಯಕಾರಿ ಉದ್ದೆಮೆಗಳಲ್ಲಿ ಬರುವುದರಿಂದ ಸದರಿ ಅಂಗಡಿಗಳಲ್ಲಿ ಯಾವುದೇ ಕಾರಣಕ್ಕೂ 18 ವರ್ಷದ ಒಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳದಂತೆ ತಿಳಿಸಲಾಗಿದೆ. ತಪ್ಪಿದ್ದಲ್ಲಿ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ 1986 ತಿದ್ದುಪಡಿ 2016 ರ ಅನ್ವಯ ಕಾನೂನು ಕ್ರಮ ಜರಗಿಸಲಾಗುವುದು ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಸದಸ್ಯ ಕಾರ್ಯದರ್ಶಿಗಳು, ಡಾ.ಸವಿತ.ಎಂ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಣೆಯಾದವರ ಪತ್ತೆಗಾಗಿ

ಮಂಡ್ಯ: ಶ್ರೀರಂಗಪಟ್ಟಣ ತಾಲ್ಲೂಕು ಆಲಗೂಡು ಗ್ರಾಮದ ಸೃಜನ್ ಗೌಡ (24) ಎಂಬುವವರು ಕಾಣೆಯಾಗಿದ್ದಾರೆ ಎಂದು ಅರಕೆರೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಾಣೆಯಾದ ವ್ಯಕ್ತಿಯು 5.5 ಅಡಿ ಎತ್ತರ ಇದ್ದು, ಹೆಣ್ಣೆ ಗೆಂಪು ಮೈ ಬಣ್ಣ, ಸಾದಾರಣ ಶರೀರವಿರುತ್ತದೆ.

ಕಾಣೆಯಾದ ವ್ಯಕ್ತಿಯ ಸುಳಿವು ಸಿಕ್ಕಲ್ಲಿ ದೂ ಸಂ 9480804857, 08232224888, 08232224500 ಅನ್ನು ಸಂಪರ್ಕಿಸಬಹುದು ಎಂದು ಅರಕೆರೆ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್ಪೆಕ್ಟರ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

IndiaShelter Home Loans **ಇಂಡಿಯಾ ಶೆಲ್ಟರ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್**

ಸ್ಥಿರ ಆಸ್ತಿಗಾಗಿ ಸ್ವಾಧೀನ ಸೂಚನೆ

ನೋಂದಣಿ ಕಚೇರಿ:– ಪ್ಲಾಟ್–15, 6ನೇ ಮಹಡಿ, ಸೆಕ್ಟರ್–44, ಸಾಂಸ್ಥಿಕ ಪ್ರದೇಶ, ಗುರುಗ್ರಾಮ್, ಹರಿಯಾಣ–122002., ಶಾಖೆ ಕಚೇರಿ:– ಕೋಲಾರ, ಕರ್ನಾಟಕ.

ಕೆಳಗೆ ಸಹಿ ಮಾಡಿರುವವರು **ಇಂಡಿಯಾ ಶೆಲ್ಟರ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್**ನ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಆಸ್ತಿಗಳು ಮತ್ತು ಜಾರಿ (ಭದ್ರತಾ) ಹಿತಾಸಕ್ತಿ ಕಾಯ್ದೆ, 2002 ರ ಸೆಕ್ಷನ್ 13(2) ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 3 ರೊಂದಿಗೆ ಓದಿದ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸುವ ಮೂಲಕ, ಇಲ್ಲಿ ಕೆಳಗೆ ಉಲ್ಲೇಖಿಸಿದಂತೆ ಖಾತೆಯ ಮುಂದೆ ನಮೂದಿಸಲಾದ ದಿನಾಂಕದಂದು ಡಿಮ್ಯಾಂಡ್ ನೋಟಿಸ್ ಅನ್ನು ಹೊರಡಿಸಿದ್ದಾರೆ, ಸಾಲಗಾರ ಮತ್ತು ಆಸ್ತಿ/ಶ್ಯೂರಿಟಿಯ ಮಾಲೀಕರು ಸಹ ಸೂಚನೆಯ ದಿನಾಂಕದಿಂದ 60 ದಿನಗಳ ಒಳಗೆ ಮೊತ್ತವನ್ನು ಮರುಪಾವತಿಸುವಂತೆ ಕರೆ ನೀಡಿದ್ದಾರೆ. ಆಸ್ತಿಯ ಮಾಲೀಕರು ಮತ್ತು ಇತರರು ಮೊತ್ತವನ್ನು ಮರುಪಾವತಿಸಲು ವಿಫಲರಾಗಿದ್ದರೂ, ಕೆಳಗೆ ಸಹಿ ಮಾಡಿದವರು ಕೆಳಗೆ ವಿವರಿಸಿದ ಆಸ್ತಿಯನ್ನು **ಸ್ವಾಧೀನಪಡಿಸಿಕೊಂಡಿದ್ದಾರೆ** ಎಂದು ಗಮನಕ್ಕೆ ಬಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಸೂಚನೆ ನೀಡಲಾಗಿದೆ, ಪ್ರತಿ ಖಾತೆಯ ವಿರುದ್ಧ ಉಲ್ಲೇಖಿಸಲಾದ ದಿನಾಂಕಗಳಲ್ಲಿ ಸದರಿ ನಿಯಮಗಳ 8 ಮತ್ತು 9 ನೇ ನಿಯಮಗಳೊಂದಿಗೆ ಓದಲಾದ ಸದರಿ ಕಾಯಿದೆಯ ಸೆಕ್ಷನ್ 13(4) ರ ಅಡಿಯಲ್ಲಿ ಅವರಿಗೆ ನೀಡಲಾದ ಅಧಿಕಾರವನ್ನು ಚಲಾಯಿಸಿ. ಈಗ, ನಿರ್ದಿಷ್ಟವಾಗಿ ಸಾಲಗಾರ ಮತ್ತು ಸಾರ್ವಜನಿಕರು ಆಸ್ತಿ/ಆಸ್ತಿಗಳೊಂದಿಗೆ ವ್ಯವಹರಿಸದಂತೆ ಎಚ್ಚರಿಕೆ ನೀಡಲಾಗಿದೆ ಮತ್ತು ಆಸ್ತಿ/ಆಸ್ತಿಗಳೊಂದಿಗೆ ಯಾವುದೇ ವ್ಯವಹಾರವು ಕೆಳಗೆ ಉಲ್ಲೇಖಿಸಲಾದ ಮೊತ್ತ ಮತ್ತು ಅದರ ಮೇಲಿನ ಬಡ್ಡಿ, ವೆಚ್ಚಗಳು ಇತ್ಯಾದಿಗಳಿಗೆ ಇಂಡಿಯಾ ಶೆಲ್ಟರ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್ನ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

ಸಾಲಗಾರ/ಖಾತರಿದಾರರ ಹೆಸರು (ಆಸ್ತಿಯ ಮಾಲೀಕರು) ಮತ್ತು ಸಾಲ ಖಾತೆ ಸಂಖ್ಯೆ	ಚಾರ್ಜ್ ಮಾಡಲಾದ/ಅಡಮಾನ ಇಟ್ಟ ಆಸ್ತಿಯ ವಿವರಣೆ (ಆಸ್ತಿಯ ಎಲ್ಲಾ ಭಾಗ ಮತ್ತು ವಿಭಾಗ ಇವುಗಳನ್ನು ಒಳಗೊಂಡಿದೆ)	ಡಿಮ್ಯಾಂಡ್ ನೋಟಿಸ್ ದಿನಾಂಕ, ಡಿಮ್ಯಾಂಡ್ ನೋಟಿಸ್ ದಿನಾಂಕದಂದು ಬಾಕಿ ಇರುವ ಮೊತ್ತ	ಸ್ವಾಧೀನದ ದಿನಾಂಕ
1. ಶ್ರೀ/ ಶ್ರೀಮತಿ ಗಾಯತ್ರಿ ಕೆ ಎಸ್, 2. ಶ್ರೀ/ ಶ್ರೀಮತಿ ಬಾಲಾಜಿ ಎನ್ 551 ಗಾಂಧಿ ನಗರ ಗಾಂಧಿನಗರ ಕೋಲಾರ–563101 ಕರ್ನಾಟಕ **LAN.: LA11CILONS00000 5042302/AP-10092001**	40 ಹೊಸ ಪುರಸಭೆಯ ಖಾತಾ ಸಂಖ್ಯೆ 232, ಅಸೆಸ್ಮೆಂಟ್ ಸಂಖ್ಯೆ 668, ಆಸ್ತಿ ಸಂಖ್ಯೆ 1–1–101–6, ಗಾಂಧಿನಗರ, ಕೋಲಾರ ಪಟ್ಟಣ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ ಹೊಂದಿರುವ ಎಲ್ಲಾ ಸ್ಥಿರ ಆಸ್ತಿಯ ಭಾಗವು ಪೂರ್ವದಿಂದ ಪಶ್ಚಿಮಕ್ಕೆ 45 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 1800 ಚದರ ಅಡಿ ಅಳತೆಯನ್ನು ಹೊಂದಿದ್ದು, ಅದರ ಮೇಲೆ ನಿರ್ಮಿಸಲಾದ ಮನೆಯೊಂದಿಗೆ ಮತ್ತು **ಈ ಕೆಳಗಿನಂತೆ ಸುತ್ತುವರೆದಿದೆ:–ಪೂರ್ವ–** ಆಸ್ತಿ ವೆಂಕಟೇಶಪ್ಪ **ಪಶ್ಚಿಮ–** ಪುರಸಭೆ ರಸ್ತೆ **ಉತ್ತರ** ಪುರಸಭೆ ರಸ್ತೆ **ದಕ್ಷಿಣ–** ಪುರಸಭೆ ರಸ್ತೆ	ನೋಟೀಸಿನಲ್ಲಿ ಉಲ್ಲೇಖಿಸಲಾದ ಎಲ್ಲಾ ಮೇಲ್ಕಂಡವುಗಳಿಗೆ ಮನವಿ ಮಾಡಲಾಗುತ್ತಿದೆ. **ರೂ.1468255/– (ಹದಿನಾಲ್ಕು ಲಕ್ಷದ ಅರವತ್ತೆಂಟು ಸಾವಿರದ ಇನ್ನೂರು ಐವತ್ತೈದು ಮಾತ್ರ)** ಡಿಮ್ಯಾಂಡ್ ನೋಟಿಸ್ ದಿನಾಂಕ **12–ಫೆಬ್ರವರಿ–2025** 10/02/2025 ರಂತೆ, 11/02/2025 ರಿಂದ ಅನ್ವಯವಾಗುವ ಹೆಚ್ಚಿನ ಬಡ್ಡಿ ಮತ್ತು ಪಾವತಿ ದಿನಾಂಕದವರೆಗಿನ ವೆಚ್ಚದೊಂದಿಗೆ.	05–11–2026
1. ಶ್ರೀ/ ಶ್ರೀಮತಿ ಸುಜಾತಾ ಕೆ, 2. ಶ್ರೀ/ಶ್ರೀಮತಿ. ಶಶಿಧರ್ ಕೋಲಾರ ಮುಖ್ಯ ರಸ್ತೆ ಎಸ್ ರೆಸಾರ್ಟ್ ಆಶ್ರಯ ಲೇಔಟ್ ಹತ್ತಿರ 563114 ಕರ್ನಾಟಕ ಎಸ್ ಎನ್ ಲ್ಯಾನ್. **HL11CHLONS 000005052794/HL11CHLO NS000005063573/AP-10121051 & AP-10150007**	ಮುನ್ಸಿಪಲ್ ಅಸೆಸ್ಮೆಂಟ್ ಸಂಖ್ಯೆ 51/209, ಪಿಐಡಿ ಸಂಖ್ಯೆ 45–503–131 ಹೊಂದಿರುವ ಸ್ಥಿರ ಆಸ್ತಿಯ ಎಲ್ಲಾ ಭಾಗ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಕಸಬಾ ಹೋಬಳಿಯ ಬಂಗಾರಪೇಟೆ ಪಟ್ಟಣದ ಇಂದಿರಾ ಆಶ್ರಯ ಲೇಔಟ್ನಲ್ಲಿ ನೆಲೆಗೊಂಡಿರುವ ಇದು ಈಗ ವಾರ್ಡ್ ಸಂಖ್ಯೆ 8 ರ ಟಿಎಂಸಿ ಬಂಗಾರಪೇಟೆಯ ಮಿತಿಗೆ ಬರುತ್ತದೆ. ಪೂರ್ವದಿಂದ ಪಶ್ಚಿಮಕ್ಕೆ 6.096012 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 9.144018 ಮೀಟರ್ ಅಳತೆಯಲ್ಲಿ ಒಟ್ಟು 55.7418 ಚದರ ಮೀಟರ್ ಅಳತೆಯಲ್ಲಿ ಅದರ ಮೇಲೆ ನಿರ್ಮಿಸಲಾದ ಮನೆಯೊಂದಿಗೆ ಮತ್ತು ಈ ಕೆಳಗಿನ ಗಡಿಗಳನ್ನು ಹೊಂದಿದೆ **ಪೂರ್ವ**–5 03–1 ನೇ ಮುಖ್ಯ ರಸ್ತೆ ಎಡಾಯತ್ತೆ ಸೇರಿದ ಆಸ್ತಿ **ಪಶ್ಚಿಮ**– ಆಸ್ತಿ ಸಂಖ್ಯೆ 45–528–828– ಸಯೀದ್ ಮೌಲ್ವೆ ಸೇರಿದ ಆಸ್ತಿ **ಉತ್ತರ**–ಆಸ್ತಿ ಸಂಖ್ಯೆ 45–503–135– ಆಸ್ತಿ ಮದರಸ್ಸೆ ಸೇರಿದ ಆಸ್ತಿ **ದಕ್ಷಿಣ**–528–14 ನೇ ಅಡ್ಡ ರಸ್ತೆ – ಆಸ್ತಿ ಶ್ರೀಕಂಠಯ್ಯ ಅವರಿಗೆ ಸೇರಿದ ಆಸ್ತಿ	ದಿನಾಂಕ 12–**ಜೂನ್**–2025 ರಂದು ಡಿಮ್ಯಾಂಡ್ ನೋಟಿಸ್ನಲ್ಲಿ ಉಲ್ಲೇಖಿಸಲಾದ ಎಲ್ಲಾ ಸೂಚನೆಗಳಿಗೆ 10–06–2026 ರಂತೆ **ರೂ. 1218550/– (ರೂಪಾಯಿಗಳು ಹನ್ನೆರಡು ಲಕ್ಷದ ಹದಿನೆಂಟು ಸಾವಿರದ ಐದುನೂರ ಐವತ್ತು ಮಾತ್ರ)** ಮತ್ತು 11–06–2026 ರಿಂದ ಅನ್ವಯವಾಗುವ ಹೆಚ್ಚಿನ ಬಡ್ಡಿ ಮತ್ತು ಪಾವತಿ ದಿನಾಂಕದವರೆಗಿನ ವೆಚ್ಚವನ್ನು ಕೋರಲಾಗಿದೆ.	05–11–2026
1. ಶ್ರೀ/ಶ್ರೀಮತಿ. ಸರಸಮ್ಮ, 2. ಶ್ರೀ/ಶ್ರೀಮತಿ. ಗೌತಮ್ ಬಿ. 3. ಶ್ರೀ/ಶ್ರೀಮತಿ. ಶ್ಯಾಮಲಾ, ಹೌಸ್ ಬಿಡೋ ಆಪ್ಟ್ 100 ವಿಲೇಜ್ ಟೌನ್ ಸಿಟಿ, ದೇವರಾಯಸಮುದ್ರ ಮುಳಬಾಗಲು ಕೋಲಾರ ದೇವರಾಯ ಸಮುದ್ರ ಕರ್ನಾಟಕ 563127, ಬೆಂಗಳೂರು, **LAN.: HLKLSVLONS00000 5139469/ AP-10321078**	ದೇವಾಯಸಮುದ್ರ ಗ್ರಾಮ, ದೇವಾಯಸಮುದ್ರ ಗ್ರಾಮ ಪಂಚಾಯತ್, ಮುಳಬಾಗಲು ತಾಲ್ಲೂಕು, ಕೋಲಾರ ಜಿಲ್ಲೆ ಮತ್ತು ಈ ಕೆಳಗಿನಂತೆ ಗಡಿಗಳು: – V.P. ಖಾತಾ ಸಂಖ್ಯೆ 417, ಆಸ್ತಿ ಸಂಖ್ಯೆ 1519009021001 20745 ಹೊಂದಿರುವ ಆಸ್ತಿಯ ಎಲ್ಲಾ ಭಾಗ ಮತ್ತು ವಿಭಾಗ, 8.8392X14.9352 ಮೀಟರ್ ಅಳತೆ, ಒಟ್ಟು 132.02 ಚದರ ಮೀಟರ್ ಅಳತೆ. – **ಗಡಿ: – ಪೂರ್ವಕ್ಕೆ** ರಸ್ತೆ **ಪಶ್ಚಿಮಕ್ಕೆ** ಶ್ರೀನಿವಾಸನ ಸ್ಥಳ, **ಉತ್ತರಕ್ಕೆ** ಅಶಾಳ ಮನೆ, **ದಕ್ಷಿಣಕ್ಕೆ** ಖಾಲಿ ಇರುವ ಸ್ಥಳ.	ಡಿಮ್ಯಾಂಡ್ ನೋಟಿಸ್ ದಿನಾಂಕ 10–07–2026 ನೋಟೀಸಿನಲ್ಲಿ ಉಲ್ಲೇಖಿಸಲಾದ ಎಲ್ಲಾ ವಿಷಯಗಳಿಗೆ ಮನವಿ ಮಾಡಲಾಗುತ್ತಿದೆ. **ರೂ. 880085/– (ರೂಪಾಯಿ ಎಂಟು ಲಕ್ಷ ಎಂಬತ್ತು ಸಾವಿರ ಎಂಬತ್ತೈದು ಮಾತ್ರ)** 06–07–2026 ರಂತೆ, ಹೆಚ್ಚಿನ ಬಡ್ಡಿ ಮತ್ತು ಪಾವತಿ ದಿನಾಂಕದವರೆಗಿನ ವೆಚ್ಚವನ್ನು 07–07–2026 ರಿಂದ ಅನ್ವಯಿಸಲಾಗುತ್ತದೆ.	05–11–2026

ದಿನಾಂಕ: 08–11–2026, ಸ್ಥಳ: ಕೋಲಾರ – ಕರ್ನಾಟಕ, ಸಹಿ/– (ಅಧಿಕೃತ ಅಧಿಕಾರಿ) ಇಂಡಿಯಾ ಶೆಲ್ಟರ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್ಗಾಗಿ
ಯಾವುದೇ ಪ್ರಶ್ನೆಗೆ ದಯವಿಟ್ಟು ಶ್ರೀ ನವೀನ್ (+91 9986666865), ಶ್ರೀ ಮುರುಳಿ (+91 7411697050) ಅಥವಾ ಶ್ರೀ ರಾಜಶೇಖರ್ (+91 9900778696) ಶ್ರೀ ಕಲ್ಯಾಣ್ ಕುಮಾರ್ ವಿ (+91 8073755149) ಅವರನ್ನು ಸಂಪರ್ಕಿಸಿ.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ

ಕೆನರಾ ಬ್ಯಾಂಕ್
ಎಆರ್ಎಂ ಶಾಖೆ-1
2ನೇ ಮಹಡಿ, ನಂ. 86, ಸ್ಪೆನ್ಸರ್ಸ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು-560001.

ಹರಾಜು ಮಾರಾಟ ಪ್ರಕಟಣೆ

ಪ್ರಾವಿಜನ್ ನಿಯಮ 8(6)ರ ಸೆಕ್ಯೂರಿಟಿ ಇಂಟರೆಸ್ಟ್ ಎನ್ಫೋರ್ಸ್ಮೆಂಟ್ ನಿಯಮ 2002ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ಫೋರ್ಸ್ಮೆಂಟ್ ಆಫ್ ಸೆಕ್ಯೂರಿಟಿ ಆ್ಯಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ ಎನ್ಫೋರ್ಸ್ಮೆಂಟ್ ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಯಪಡಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನದ / ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್ಎಂ ಶಾಖೆ-1ರವರು ಸಾಂಕೇತಿಕವಾಗಿ** ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು ದಿನಾಂಕ : **25.11.2026 ರಂದು (ಬೆ. 10.00 ರಿಂದ 11.00ಕ್ಕೆ)** ಸ್ವತ್ತನ್ನು ಎಲ್ಲಿದೆಯೋ ಹಾಗೆ, ಏನಿದೆಯೋ ಹಾಗೆ, ಹೇಗಿದೆಯೋ ಹಾಗೆ ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು. ಸಂದಾಯವಾಗತಕ್ಕ ಮೊಬಲಗು **ರೂ. 8,40,07,910.13/–** 06.11.2026 ರಂದು ಇದ್ದಂತೆ, ಮುಂದಿನ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು ಚುಕ್ತಾ ಮಾಡುವುದಕ್ಕೆ ಋಣಭಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್ಎಂ ಶಾಖೆ-1, ಬೆಂಗಳೂರು** ಇವರಿಂದ **ಸಾಲಗಾರರಾದ : 1. ಮೆ॥ ಭರಣಿ ಹೈ ಟೆಕ್ ಆಗ್ರೋ ಇಂಡಸ್ಟ್ರೀಸ್,** ನಂ. 1136, 2ನೇ ಮೈನ್, 2ನೇ ಬ್ಲಾಕ್, ಬಿಇಎಲ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು, ಕರ್ನಾಟಕ-560097. **2) ಶ್ರೀ ಆನಂದ ಎಲ್**, ನಂ. 1136, 2ನೇ ಮೈನ್, 2ನೇ ಬ್ಲಾಕ್, ಬಿಇಎಲ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು, ಕರ್ನಾಟಕ-560097. **3) ಶ್ರೀ ಹರ್ಷಾ ಆನಂದ,** ನಂ. 1136, 2ನೇ ಮೈನ್, 2ನೇ ಬ್ಲಾಕ್, ಬಿಇಎಲ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು, ಕರ್ನಾಟಕ-560097. **4) ಶ್ರೀಮತಿ ಚಿತ್ರಾ ಆನಂದ,** ನಂ. 1136, 2ನೇ ಮೈನ್, 2ನೇ ಬ್ಲಾಕ್, ಬಿಇಎಲ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು, ಕರ್ನಾಟಕ-560097. **5) ಶ್ರೀ ವಿಜಯ್ ಆನಂದ್,** ನಂ. 1136, 2ನೇ ಮೈನ್, 2ನೇ ಬ್ಲಾಕ್, ಬಿಇಎಲ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು, ಕರ್ನಾಟಕ-560097.

ಅರ್ನೆಸ್ಟ್ ಹಣವನ್ನು **ಮೆ॥ ಪಿಎಸ್ಬಿ ಅಲಿಯಾನ್ಸ್ ಪ್ರೈವೇಟ್ ಲಿಮಿಟೆಡ್ (https://baanknet.com/)** ಪೋರ್ಟಲ್ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ ಆರ್ಟಿಜಿಎಸ್/ನೆಫ್ಟ್ ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 24.11.2026 ರ ಸಂಜೆ 5.00 ರೊಳಗೆ ಸಲ್ಲಿಸಬೇಕು.** (ರೂ. ಲಕ್ಷಗಳಲ್ಲಿ)

Lot	ಚರ ಮತ್ತು ಸ್ಥಿರಾಸ್ತಿಗಳ ವಿವರಣೆ	ಮೀಸಲು ಬೆಲೆ	ಇಎಂಡಿ	ಬಿಡ್ ಏರಿಕೆ ಮೊತ್ತ
1	ಕೋಳಿ ಸಾಕಾಣೆ ಹೊಂದಿರುವ ಭೂಮಿ ಮತ್ತು ಸಂಪರ್ಕಿತ ರಚನೆಗಳು : ಸರ್ವೇ ನಂ. 309/1, ಪ್ರದೇಶ 4 ಎಕರೆ 20 ಗುಂಟೆಗಳು, ಗಂಗಸಂದ್ರ ಗ್ರಾಮ, ಕಸಬಾ ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. **ಚಕ್ಕುಬಂದಿ : ಉತ್ತರಕ್ಕೆ** : ಗಂಗಿರೆಡ್ಡಿರವರ ಆಸ್ತಿ, **ದಕ್ಷಿಣಕ್ಕೆ** : ಕೃಷ್ಣಪ್ಪನವರ ಆಸ್ತಿ, ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಕೆ.ಹೆಚ್. ರಾಮಕೃಷ್ಣಪ್ಪನವರ ಆಸ್ತಿ. **Coordinates of the property : Latitude- 13.576574 Longitude- 77.560258**	ರೂ. 440.00	ರೂ. 44.00	1.00
	ಒಟ್ಟು	440.00	44.00	

ಎನ್ಕಂಬರೆನ್ಸ್ ವಿವರಗಳು: ಬ್ಯಾಂಕಿನ ಗಮನಕ್ಕೆ ಬಂದಂತೆ ಇರುವುದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು ಕೆನರಾ ಬ್ಯಾಂಕ್ನ ವೆಬ್ಸೈಟ್ **(www.canarabank.com)** ಅಥವಾ ಮೆ॥ ಪಿಎಸ್ಬಿ ಅಲಿಯಾನ್ಸ್ ಪ್ರೈವೇಟ್ ಲಿಮಿಟೆಡ್ (https://baanknet.com/) ಪೋರ್ಟಲ್ನ ಇ-ವ್ಯಾಲೆಟ್ನಲ್ಲಿ ಒದಗಿಸಲಾದ "ಇ-ಹರಾಜು" ಲಿಂಕ್ ಅನ್ನು ನೋಡಿ. ಕೆನರಾ ಬ್ಯಾಂಕ್, ಎಆರ್ಎಂ ಶಾಖೆ-1, ಬೆಂಗಳೂರು, ದೂ.ನಂ. **080-25310066, 6381952519** ಮತ್ತು **9486092152** ಅನ್ನು ಯಾವುದೇ ಕೆಲಸದ ದಿನದಂದು ಕಛೇರಿಯ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ: 07.11.2026 ಸಹಿ/– ಅಧಿಕೃತ ಅಧಿಕಾರಿಗಳು
ಸ್ಥಳ: ಬೆಂಗಳೂರು ಕೆನರಾ ಬ್ಯಾಂಕ್

ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾದೀಶರು ಮತ್ತು ಜೆಎಂಎಫ್ಸಿ ನ್ಯಾಯಾಲಯ ನಾಗಮಂಗಲ
ಜಾರಿ ಸಂಖ್ಯೆ 31/2025

ಡಿಹೆಚ್.ಆರ್; ಎಂ ಮದು ಬಿನ್ ಮಂಜುನಾಥ್ ರಾವ್ ವಯಸ್ಸು 35 ವರ್ಷ, ವಾಸ : ಮಗ್ಗದ ಬೀದಿ,ಬೆಳ್ಳೂರು ನಾಗಮಂಗಲ ತಾಲ್ಲೂಕು,ಮಂಡ್ಯ ಜಿಲ್ಲೆ

ವಿರುದ್ಧ

ಜೆ.ಡಿ.ಆರ್ ಡಿ ಆಂಜನಪ್ಪ ಮೃತ ವಾರಸುದಾರರು 1) ಶಾರದಮ್ಮ ಲೇಟ್ ಡಿ ಆಂಜನಪ್ಪ ವಯಸ್ಸು 60 ವರ್ಷ 2) ಸೋಮಶೇಖರಪ್ಪ ಬಿನ್ ಲೇಟ್ ಆಂಜನಪ್ಪ ವಯಸ್ಸು 45 ವರ್ಷ 3) ಗಣೇಶ ಬಿನ್ ಲೇಟ್ ಡಿ ಆಂಜನಪ್ಪ,ವಯಸ್ಸು 40 ವರ್ಷ 4) ಮಾರುತಿ ಬಿನ್ ಲೇಟ್ ಡಿ ಆಂಜನಪ್ಪ ವಯಸ್ಸು 38 ವರ್ಷ ಎಲ್ಲರ ವಾಸ: ಮಗ್ಗದ ಬೀದಿ,ಬೆಳ್ಳೂರು, ನಾಗಮಂಗಲ ತಾಲ್ಲೂಕು ಮಂಡ್ಯ ಜಿಲ್ಲೆ

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ತೀರ್ಪುಋಣಿದಾರರ ವಿರುದ್ಧ ಕ್ರಯದ ಕರಾರು ಪತ್ರದಂತೆ ಕ್ರಯ ಪತ್ರವನ್ನು ನೊಂದಣಿ ಮಾಡಿಕೊಡುವಂತೆ ನಿರ್ದಿಷ್ಠ ಪರಿಹಾರವನ್ನು ಕೋರಿ ಓ. ಎಸ್.ನಂ 55/2018 ರ ರಿತ್ಯಾ ದಾವೆಯನ್ನು ಸಲ್ಲಿಸಿದ್ದು ಸದರಿ ದಾವೆಯು ದಿನಾಂಕ 24/012025 ರಂದು ಡಿಕ್ರಿ ಆಗಿದ್ದು ಮೇಲ್ಕಂಡ ಜಾರಿ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ. ನ್ಯಾಯಾಲಯದಿಂದ ನೋಟೀಸ್ ಕಳುಹಿಸಿದ್ದರೂ ಸಹ ನ್ಯಾಯಾಲಯದಿಂದ ಅಂಚೆ ಕಛೇರಿ ಮೂಲಕ ಕಳುಹಿಸಿರುವ ನೊಂದಾಯಿತ ಅಂಚೆಯು ಸಹ ಸದರಿ ವಿಳಾಸದಲ್ಲಿ ಮೇಲ್ಕಂಡ ಎದುರುದಾರರು ಯಾವ ವ್ಯಕ್ತಿಗಳು ಇರುವುದಿಲ್ಲವೆಂದು ವಾಪಸ್ ಬಂದಿರುತ್ತದೆ. ಆದ್ದರಿಂದ ಈ ಪತ್ರಿಕೆ ಮುಖಾಂತರ ನ್ಯಾಯಾಲಯದ ಸಮನ್ಸ್/ ನೋಟೀಸ್ ಅನ್ನು ನೀಡಲಾಗಿರುತ್ತದೆ. ಸದರಿ ಮೇಲ್ಕಂಡ ದಾವೆಯ ದಿನಾಂಕ 19/12/2026 ರಂದು ನಿಗದಿಯಾಗಿರುತ್ತದೆ. ಆದ್ದರಿಂದ 1 ರಿಂದ 4 ನೇ ಪ್ರತಿವಾದಿಗಳಾದ ತಾವಾಗಲೀ ಅಥವಾ ತಮ್ಮ ಪರ ವಕೀಲರ ಮುಖಾಂತರವಾಗಲೀ ದಿನಾಂಕ 19/12/26 ರಂದು ಮೇಲ್ಕಂಡ ನ್ಯಾಯಾಲಯದಲ್ಲಿ ಬೆಳಿಗ್ಗೆ 11 ಘಂಟೆಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ತಪ್ಪಿದ್ದಲ್ಲಿ ಪ್ರಕರಣವನ್ನು ಏಪ ಪಕ್ಷಿಯವಾಗಿ ತಿರ್ಮಾನಿಸಲಾಗುತ್ತದೆಂದು ತಿಳಿಯುವುದು.

ಷೆಡ್ಯೂಲ್ ವಿವರ

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಕಸಬಾ ಹೋಬಳಿ ನೆಲ್ಲಿಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುವ ಯಲಾದಹಳ್ಳಿ ಟಿ ಎಂ ರಸ್ತೆ ಗ್ರಾಮಠಾಣಾದ ನಾರಾಯಣ ನಗರ ಬಡಾವಣೆಗೆ ಸೇರಿರುವುದು ಗ್ರಾ ಪಂಚಾಯಿತಿ ಕಛೇರಿಯಲ್ಲಿ ಡಿ ಆಂಜನಪ್ಪ ಹೆಸರಿಗೆ ಖಾತಾ ಪಟ್ಟಾ ಅಸೆಸ್ಮೆಂಟ್ ಇರುವ ಹಾಗೂ ಅವರ ಸ್ವಂತ ಸ್ವಾಧೀನಾನುಭವದಲ್ಲಿರುವ ಯಲಾದಹಳ್ಳಿ ಟಿ ಎಂ ರಸ್ತೆಯ ನಾರಾಯಣನಗರ ಬಡಾವಣೆಯ ಸ್ವತ್ತಿನ ನಂ 152100500900520052 ಸ್ವನಂ 279/62/2 ರಲ್ಲಿ ಪೂರ್ವ ಪಶ್ಚಿಮ 10.50 (ಹತ್ತು ಪಾಯಿಂಟ್ ಐದು ಸೊನ್ನೆ) ಉತ್ತರ ದಕ್ಷಿಣ 12.192 (ಹನ್ನೆರಡು ಪಾಯಿಂಟ್ ಒಂದು ಒಂಬತ್ತು ಎರಡು) ಮೀಟರ್ ಒಟ್ಟು 128.02 ಚದರ ಮೀಟರ್ ವುಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ. ಪೂರ್ವಕ್ಕೆ : ರಸ್ತೆ ಪಶ್ಚಿಮಕ್ಕೆ : ರಮೇಶ್ ರವರ ಸ್ವತ್ತು,ಉತ್ತರಕ್ಕೆ : ರಸ್ತೆ ,ದಕ್ಷಿಣಕ್ಕೆ : 61 ನೇ ನಂಬರಿನ ನಿವೇಶನ. 2026 ನೇ ಇಸವಿ ಅಕ್ಟೋಬರ್ ತಿಂಗಳಿನ 02 ನೇ ದಿವಸದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಪ್ರಧಾನ ಹಿರಿಯ ಸಿವಿಲ್ ನ್ಯಾಯಾದೀಶರು ಮತ್ತು ಜೆಎಂಎಫ್ ಸಿ ನಾಗಮಂಗಲ

ಅರ್ಜಿದಾರರ ಪರ ವಕೀಲರು
ಎನ್ ಎಸ್ ರಾಜೇಶ್

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್ಎಂ-1 ಶಾಖೆ
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು-560001
ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್ಫೋರ್ಸ್ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಆಂಡ್ ಎನ್ಫೋರ್ಸ್ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್ಫೋರ್ಸ್ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್ಎಂ-1 ಶಾಖೆ, ಬೆಂಗಳೂರು** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ : 24.11.2026 ರಂದು (ಬೆಳಿಗ್ಗೆ 10.30 ರಿಂದ ಬೆಳಿಗ್ಗೆ 11.30 ರವರೆಗೆ)** ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 19,33,64,193.20** ಜೊತೆಗೆ **ದಿನಾಂಕ: 05.11.2026 ರಿಂದ** ಬಡ್ಡಿ ಇತರೆ ಖರ್ಚು ವೆಚ್ಚಗಳು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್ಎಂ-1 ಶಾಖೆ ಬೆಂಗಳೂರು** ರವರಿಂದ **ಸಾಲಗಾರರಾದ: (1) ಮೆ॥ ಲಕ್ಷ್ಮೀನಾರಾಯಣಸ್ವಾಮಿ ಎಂ ಸ್ಯಾಂಡ್, ಕಚೇರಿ ವಿಳಾಸ:** ಡೋರ್ ನಂ.130/4, 80 ಅಡಿ ರಸ್ತೆ, ಕೆ.ಹೆಚ್.ಬಿ. ಕಾಲೋನಿ, ಬಸವೇಶ್ವರ ನಗರ, ಬೆಂಗಳೂರು-560079. **(2) ಶ್ರೀಮತಿ ಪಾರ್ವತಮ್ಮ** ಕೋಂ ಲೇಟ್ ಲಕ್ಷ್ಮಣಪ್ಪ ಎಂ.ಆರ್., ವಿಳಾಸ: 130/4, 80 ಅಡಿ ರಸ್ತೆ, ಕೆ.ಹೆಚ್.ಬಿ. ಕಾಲೋನಿ, ಬಸವೇಶ್ವರ ನಗರ, ಬೆಂಗಳೂರು-560079. **ಮತ್ತೊಂದು ವಿಳಾಸ : ಶ್ರೀಮತಿ ಪಾರ್ವತಮ್ಮ,** 138, ಶ್ರೀನಿಕೇತನ, 7ನೇ ಮುಖ್ಯ ರಸ್ತೆ, ಮೆನ್ಸ್ ರೈಲ್ವೇ ಲೇಔಟ್, ಭವಾನಿ ನಗರ, ಉಲ್ಲಾಳ, ಬೆಂಗಳೂರು ದಕ್ಷಿಣ-560056. **ಮತ್ತೊಂದು ವಿಳಾಸ : ಶ್ರೀಮತಿ ಪಾರ್ವತಮ್ಮ,** # 403, ವಿಶ್ವೇಶ್ವರಯ್ಯ ಲೇಔಟ್, 6ನೇ ಬ್ಲಾಕ್, ಕೆ.ಎಲ್.ಇ. ಕಾನೂನು ಕಾಲೇಜು ಹತ್ತಿರ, ಬೆಂಗಳೂರು-560091. **(3) ಲಕ್ಷ್ಮೀನಾರಾಯಣಸ್ವಾಮಿ ಎಂ.ಎಲ್.** ಬಿನ್ ಲೇಟ್ ಲಕ್ಷ್ಮಣಪ್ಪ ಎಂ.ಆರ್., **(4) ಚಂದ್ರಕಲಾ ಎಂ.ಎಲ್.,** D/o ಲಕ್ಷ್ಮಣಪ್ಪ ಎಂ.ಆರ್., **ಇವರಿಬ್ಬರ ವಿಳಾಸ:** ನಂ.403, 6ನೇ ಬ್ಲಾಕ್, ಶ್ರೀ ವಿಶ್ವೇಶ್ವರಯ್ಯ ಲೇಔಟ್, ಕೆ.ಎಲ್.ಇ. ಕಾನೂನು ಕಾಲೇಜು ಹತ್ತಿರ, ಬೆಂಗಳೂರು-560091. **(5) ವಿಜಯಲಕ್ಷ್ಮಿ ಎಂ.ಎಲ್.** D/o ಲೇಟ್ ಲಕ್ಷ್ಮಣಪ್ಪ ಎಂ.ಆರ್., **ವಿಳಾಸ:** ದಾಸೇಗೌಡನ ಪಾಳ್ಯ ಗ್ರಾಮ, ಹೆಬ್ಬೂರು ಹೋಬಳಿ, ತುಮಕೂರು ತಾಲ್ಲೂಕು-572118. **(6) ಯಶೋಧ ಎಂ.ಎಲ್.** D/o ಲೇಟ್ ಲಕ್ಷ್ಮಣಪ್ಪ ಎಂ.ಆರ್., **ವಿಳಾಸ:** ನಂ.403, 6ನೇ ಬ್ಲಾಕ್, ಶ್ರೀ ವಿಶ್ವೇಶ್ವರಯ್ಯ ಲೇಔಟ್, ಕೆ.ಎಲ್.ಇ. ಕಾನೂನು ಕಾಲೇಜು ಹತ್ತಿರ, ಬೆಂಗಳೂರು-560091. **(7) ಪ್ರಮಿಳಾ ಎಂ.ಎಲ್.,** D/o ಲೇಟ್ ಲಕ್ಷ್ಮಣಪ್ಪ ಎಂ.ಆರ್., **ವಿಳಾಸ:** ನಂ.111, 12ನೇ ಕ್ರಾಸ್, 9ನೇ ಮುಖ್ಯ ರಸ್ತೆ, ಮೌಂಟ್ ಕಾರ್ಮೆಲ್ ಶಾಲೆಯ ಎದುರು, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿ ನಗರ, ಬೆಂಗಳೂರು-560098. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com)** ಪೋರ್ಟಲ್ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 23.11.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. **(₹. ಲಕ್ಷಗಳಲ್ಲಿ)**

ಲಾಟ್	ಸ್ಥಿರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಭೂಮಿಯ ಸರ್ವೆ ನಂ.43/ಪಿ1, ಖಾತಾ ನಂ.167 ಮತ್ತು 168, ದಾನ್ಯಕಣಪುರ ಗ್ರಾಮ, ಬೈಥಾ ಗ್ರಾಮ, ಒಡಿಗೆರೆ ಹೋಬಳಿ, ತುಮಕೂರು ಜಿಲ್ಲೆ-572104. 14 ಎಕರೆ 9 ಗುಂಟೆಗಳು ಶ್ರೀ ಲಕ್ಷ್ಮಣಪ್ಪ ಎಂ ಆರ್ ಬಿನ್ ರಾಮಯ್ಯ ರವರ ಹೆಸರಿನಲ್ಲಿದೆ ಮತ್ತು 5 ಎಕರೆ ಶ್ರೀಮತಿ ಪಾರ್ವತಮ್ಮ ಕೋಂ ಲಕ್ಷ್ಮಣಪ್ಪ ಎಂ ಆರ್ ರವರ ಹೆಸರಿನಲ್ಲಿದೆ, ಒಟ್ಟು ವಿಸ್ತೀರ್ಣ 14 ಎಕರೆ, ಕೇವಲ 4 ಎಕರೆ ಭೂಮಿ (ಖಾತಾ ನಂ.167 ಮತ್ತು 168 ರಲ್ಲಿ ತಲಾ 2 ಎಕರೆ) ಕೈಗಾರಿಕಾ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ. Along with Hypothecated Plant & Machinery [Excluding Generators of 300 KW & 1200 KWA]	₹. 1103.00	₹. 110.30	₹. 10.00	18.11.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 4.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧಾರಿತದಂತೆ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು ಕೆನರಾ ಬ್ಯಾಂಕ್ನ ವೆಬ್ಸೈಟ್ **(www.canarabank.com)** ಅಥವಾ **ಮೆ॥ ಪಿಎಸ್ಬಿ ಅಲೈಯನ್ಸ್ ಪ್ರೈವೇಟ್ ಲಿಮಿಟೆಡ್ (https://baanknet.com/)** ಪೋರ್ಟಲ್ನ ಇ-ವ್ಯಾಲೆಟ್ನಲ್ಲಿ ಒದಗಿಸಲಾದ "ಇ-ಹರಾಜು" ಲಿಂಕ್ ಅನ್ನು ನೋಡಿ. **ಕೆನರಾ ಬ್ಯಾಂಕ್, ಎಆರ್ಎಂ-1 ಶಾಖೆ,** ಬೆಂಗಳೂರು **ಮೊಬೈಲ್ ಸಂಖ್ಯೆ: 080-25310066, 9486092152, ಚಿಟಿಜ 9866977711** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 06.11.2026 ಸಹಿ/– ಅಧಿಕೃತ ಅಧಿಕಾರಿ,
ಸ್ಥಳ : ಬೆಂಗಳೂರು ಕೆನರಾ ಬ್ಯಾಂಕ್

ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ (ಒಂದು ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್)
AU SMALL FINANCE BANK – A SCHEDULED COMMERCIAL BANK
ನೋಂ. ಕಚೇರಿ : 19–ಎ, ಧೂಲೇಶ್ವರ್ ಗಾರ್ಡನ್, ಅಜ್ಮೀರ್ ರಸ್ತೆ, ಜೈಪುರ – 302001. (CIN L36911RJ1996PLC011381)

ಅಪೆಂಡಿಕ್ಸ್ IV [ನಿಯಮ8(1) ನ್ನು ನೋಡಿ] ಸ್ವಾಧೀನತೆ ಸೂಚನೆ

ಸಾಲಗಾರರು ಮತ್ತು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, "ಫಿನ್ಕೇರ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್" ಯು 01ನೇ ಏಪ್ರಿಲ್ 2024 ರಿಂದ ಜಾರಿಗೆ ಬರುವಂತೆ "ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್" ನೊಂದಿಗೆ ವಿಲೀನಗೊಂಡಿದೆ. "ಹಣಕಾಸಿನ ಆಸ್ತಿಗಳ ಭದ್ರತಾಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿಯ ಜಾರಿ ಕಾಯಿದೆ, 2002 (2002ರ 54)" ರ ಅಡಿಯಲ್ಲಿ ಹಾಗೂ "ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002" ರ ನಿಯಮ 3 ರೊಂದಿಗೆ ಓದಿಕೊಂಡಂತೆ ಸೆಕ್ಷನ್ 13 (12) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, 'ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್' (ಒಂದು ಅನುಸೂಚಿತ ವಾಣಿಜ್ಯ ಬ್ಯಾಂಕ್) ನ ಅಧಿಕೃತ ಅಧಿಕಾರಿಯಾಗಿರುವ ನಾನು, ಕೆಳಗಿನ ಕೋಷ್ಟಕದಲ್ಲಿ ನೀಡಿರುವ ವಿವರಗಳಂತೆ, ಸಾಲಗಾರರು ಸದರಿ ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳೊಳಗೆ ಅದರಲ್ಲಿ ನಮೂದಿಸಲಾದ ಮೊತ್ತವನ್ನು ಮರುಪಾವತಿಸುವಂತೆ ಕೋರಿ, ಕೆಳಗೆ ನಮೂದಿಸಿದ ದಿನಾಂಕದಂದು ತಗಾದೆ ಸೂಚನೆಯನ್ನು ನೀಡುತ್ತಿದ್ದೇನೆ.

ಸಾಲಗಾರರ/ಸಹ-ಸಾಲಗಾರರ/ಅಡಮಾನದಾರರ/ ಜಾಮೀನುದಾರರ ಹೆಸರು/ಸಾಲದ ಖಾತಾ ಸಂ.	13(2) ನೋಟೀಸ್ ದಿನಾಂಕ ಮತ್ತು ಮೊತ್ತ	ಸ್ವಾಧೀನತೆ ಪಡೆದ ದಿನಾಂಕ
(ಸಾಲ ಖಾತೆ ಸಂಖ್ಯೆ) 23660001672966, ಚಂದ್ರಕಲಾ ಕೆ.ಜಿ (ಸಾಲಗಾರರು), ಜನಾರ್ಧನ (ಸಹ-ಸಾಲಗಾರರು)	25-ನವೆಂಬರ್-25, ರೂ. 20,07,235/- (ರೂಪಾಯಿ ಇಪ್ಪತ್ತು ಲಕ್ಷದ ಏಳು ಸಾವಿರದ ಇನ್ನೂರ ಮೂವತ್ತೈದು ಮಾತ್ರ), 24-ನವೆಂಬರ್-25 ರಂತೆ	04 ನವೆಂಬರ್ 26
ಅಡಮಾನ ಇಟ್ಟ ಆಸ್ತಿಯ ವಿವರ: ಇ-ಸ್ವತ್ತು ಸಂಖ್ಯೆ 1519009011001000341, ಆಸ್ತಿ ಸಂಖ್ಯೆ 293/1, ಪೂರ್ವದಿಂದ ಪಶ್ಚಿಮಕ್ಕೆ 14.0208 ಮೀಟರ್, ಉತ್ತರದಿಂದ ದಕ್ಷಿಣಕ್ಕೆ 14.6304 ಮೀಟರ್, ಒಟ್ಟು ವಿಸ್ತೀರ್ಣ 207.36 ಚದರ ಮೀಟರ್. ಈ ಆಸ್ತಿಯು ಕೋಲಾರ ಜಿಲ್ಲೆ, ಮುಳಬಾಗಿಲು ತಾಲೂಕು, ಬೈರಕೂರು ಹೋಬಳಿ, ಬೈರಕೂರು ಗ್ರಾಮ ಪಂಚಾಯಿತಿ, ಬೈರಕೂರು ಗ್ರಾಮದಲ್ಲಿದೆ. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ 14.0208 ಮೀಟರ್, ಉತ್ತರದಿಂದ ದಕ್ಷಿಣಕ್ಕೆ 14.6304 ಮೀಟರ್, ಒಟ್ಟು ವಿಸ್ತೀರ್ಣ 207.36 ಚದರ ಮೀಟರ್. ಚಕ್ಕುಬಂದಿ : ಪೂರ್ವಕ್ಕೆ: ಚಿಕ್ಕಮುನಿಶಾಮಿ; ಪಶ್ಚಿಮಕ್ಕೆ: ರಸ್ತೆ; ಉತ್ತರಕ್ಕೆ: ಪುಂಗನೂರು ರಸ್ತೆ; ದಕ್ಷಿಣಕ್ಕೆ: ರಸ್ತೆ		
(ಸಾಲ ಖಾತೆ ಸಂಖ್ಯೆ) 23660000764381 ಮತ್ತು 24660002774875, ಡಿ.ಆರ್. ಉದಯಶಂಕರ್ (ಸಾಲಗಾರರು), ಶಿವಮ್ಮ ವಿ (ಸಹ-ಸಾಲಗಾರರು)	16-ಮಾರ್ಚ್-26, ರೂ. 7,90,788/- (ರೂಪಾಯಿ ಏಳು ಲಕ್ಷದ ತೊಂಬತ್ತು ಸಾವಿರದ ಏಳುನೂರ ಎಂಬತ್ತೆಂಟು ಮಾತ್ರ), 12-ಮಾರ್ಚ್-26 ರಂತೆ.	04 ನವೆಂಬರ್ 26
ಅಡಮಾನ ಇಟ್ಟ ಆಸ್ತಿಯ ವಿವರ: ಇ-ಸ್ವತ್ತು ಸಂಖ್ಯೆ 151900901500100069, ಆಸ್ತಿ ಸಂಖ್ಯೆ 34/36/2, ಪೂರ್ವದಿಂದ ಪಶ್ಚಿಮಕ್ಕೆ 19.2024 ಮೀಟರ್, ಉತ್ತರದಿಂದ ದಕ್ಷಿಣಕ್ಕೆ 13.4112 ಮೀಟರ್, ಒಟ್ಟು ವಿಸ್ತೀರ್ಣ 114.46 ಚದರ ಮೀಟರ್. ಈ ಆಸ್ತಿಯು ಕೋಲಾರ ಜಿಲ್ಲೆ, ಮುಳಬಾಗಿಲು ತಾಲೂಕು, ದುಗ್ಗಸಂದ್ರ ಹೋಬಳಿ, ಉತ್ತನೂರು ಗ್ರಾಮ ಪಂಚಾಯಿತಿ, ಉತ್ತನೂರು ಗ್ರಾಮದಲ್ಲಿದೆ. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ 19.2024 ಮೀಟರ್, ಉತ್ತರದಿಂದ ದಕ್ಷಿಣಕ್ಕೆ 13.4112 ಮೀಟರ್, ಒಟ್ಟು ವಿಸ್ತೀರ್ಣ 114.46 ಚದರ ಮೀಟರ್, ಇಲ್ಲಿರುವ ಪ್ರಸ್ತುತ ಹಾಗೂ ಭವಿಷ್ಯದ ಕಟ್ಟಡಗಳೊಂದಿಗೆ. ಚಕ್ಕುಬಂದಿ :ಪೂರ್ವಕ್ಕೆ: ಕೆ.ವಿ. ರಾಮಮೂರ್ತಿ ಮತ್ತು ಸಂದು ರಸ್ತೆ; ಪಶ್ಚಿಮಕ್ಕೆ: ವಜೀರ್ ಸಾಬ್; ಉತ್ತರಕ್ಕೆ: ಬಿ. ನಾರಾಯಣಪ್ಪ; ದಕ್ಷಿಣಕ್ಕೆ: ರಸ್ತೆ.		
(ಸಾಲ ಖಾತೆ ಸಂಖ್ಯೆ) 23660002170593, ಕದಿರಪ್ಪ (ಸಾಲಗಾರರು), ರೆಡ್ಡಮ್ಮ (ಸಹ-ಸಾಲಗಾರರು), ವೆಂಕಟರಾಮಪ್ಪ (ಸಹ-ಸಾಲಗಾರರು)	27-ಏಪ್ರಿಲ್-26, ರೂ. 6,99,834/- (ರೂಪಾಯಿ ಆರು ಲಕ್ಷದ ತೊಂಬತ್ತೊಂಬತ್ತು ಸಾವಿರದ ಎಂಟುನೂರ ಮೂವತ್ತನಾಲ್ಕು ಮಾತ್ರ) 27-ಏಪ್ರಿಲ್-26 ರಂತೆ	04 ನವೆಂಬರ್ 26
ಅಡಮಾನ ಇಟ್ಟ ಆಸ್ತಿಯ ವಿವರ: ಸ್ಥಿರಾಸ್ತಿ ಸಂಖ್ಯೆ: ಇ-ಸ್ವತ್ತು ನಮೂನೆ ಸಂಖ್ಯೆ 11ಬಿ, ಇ-ಸ್ವತ್ತು ಸಂಖ್ಯೆ 151900900600620012, ಆಸ್ತಿ ಸಂಖ್ಯೆ 26/28, ಪೂರ್ವದಿಂದ ಪಶ್ಚಿಮಕ್ಕೆ 9.4488 ಮೀಟರ್, ಉತ್ತರದಿಂದ ದಕ್ಷಿಣಕ್ಕೆ 6.7056 ಮೀಟರ್, ಒಟ್ಟು ವಿಸ್ತೀರ್ಣ 63.36 ಚದರ ಮೀಟರ್. ಈ ಆಸ್ತಿಯು ಕೋಲಾರ ಜಿಲ್ಲೆ, ಮುಳಬಾಗಿಲು ತಾಲೂಕು, ದುಗ್ಗಸಂದ್ರ ಹೋಬಳಿ, ಹೆಚ್. ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ, ನಾಚಹಳ್ಳಿ ಗ್ರಾಮದಲ್ಲಿದೆ. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ 9.4488 ಮೀಟರ್, ಉತ್ತರದಿಂದ ದಕ್ಷಿಣಕ್ಕೆ 6.7056 ಮೀಟರ್, ಒಟ್ಟು ವಿಸ್ತೀರ್ಣ 63.36 ಚದರ ಮೀಟರ್, ಇಲ್ಲಿರುವ ಪ್ರಸ್ತುತ ಹಾಗೂ ಭವಿಷ್ಯದ ಕಟ್ಟಡಗಳೊಂದಿಗೆ. ಚಕ್ಕುಬಂದಿ : ಪೂರ್ವಕ್ಕೆ: ಮುನಿವರದಪ್ಪ; ಪಶ್ಚಿಮಕ್ಕೆ: ರಸ್ತೆ ಮತ್ತು ಲಿಂಗಮನಾಯ್ಡು; ಉತ್ತರಕ್ಕೆ: ಸಂದು ರಸ್ತೆ; ದಕ್ಷಿಣಕ್ಕೆ: ವೆಂಕಟೇಶಪ್ಪ ಅವರ ಮನೆ		

ಸಾಲಗಾರರು ಹಣವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಆದುದರಿಂದ ಸಾಲಗಾರರು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ನೋಟೀಸ್ ನೀಡುವುದೇನೆಂದರೆ, ಕೆಳಸಹಿದಾರರು ಈ ಮೇಲೆ ವಿವರಿಸಿದ ಆಸ್ತಿಯನ್ನು ಸೆಕ್ಷನ್ 13(4) ರ ಹೇಳಲಾದ ಕಾಯಿದೆ [ಕಾಯಿದೆ 2002] ರ ಅಡಿ ನಿಯಮ 8ನ್ನು ಓದಿಕೊಂಡಂತೆ ಆತ/ಅವಳು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಮೇಲೆ ಅಂಕಣದಲ್ಲಿ ವಿವರಿಸಿದ ದಿನಾಂಕದಂದು ಸ್ವಾಧೀನಪಡಿಸಿಕೊಂಡಿರುತ್ತಾರೆ.
"ಸಾಲಗಾರರ ಗಮನಕ್ಕೆ ತರಲು ಬಯಸುವುದೇನೆಂದರೆ, ಸೆಕ್ಷನ್ 13 ರ ಸಬ್-ಸೆಕ್ಷನ್ (8) ರ ನಿಯಮ 8(6) ಅನ್ವಯ ಬಾಕಿ ಉಳಿದ ಕಾಲಾವಕಾಶದಲ್ಲಿ ಭದ್ರತಾ ಆಸ್ತಿಗಳನ್ನು ನೀವು ಮರುಪಡೆದುಕೊಳ್ಳಬಹುದಾಗಿದೆ.
ನಿರ್ದಿಷ್ಟವಾಗಿ ಸಾಲಗಾರರು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಈ ಆಸ್ತಿ ಬಗ್ಗೆ ಯಾವುದೇ ರೀತಿಯಲ್ಲಿ ವ್ಯವಹರಿಸಕೂಡದು ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಎ ಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ಗೆ (ಒಂದು ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್) ಈ ಮೇಲೆ ಅಂಕಣದಲ್ಲಿ ನಮೂದಿಸಿದ ಬರಬೇಕಾದ ಬಾಕಿ ಮೊತ್ತ ಮತ್ತು ಬಡ್ಡಿಯನ್ನು ಪಾವತಿಸುವುದಕ್ಕೆ ಒಳಪಡುತ್ತದೆ.

ದಿನಾಂಕ: 07.11.2026 ಸ್ಥಳ : ಮೈಸೂರು, ಕರ್ನಾಟಕ ಅಧಿಕೃತ ಅಧಿಕಾರಿ, ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಪಂಜಾಬ್ ನ್ಯಾಷನಲ್ ಬ್ಯಾಂಕ್

ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ (ಎಆರ್ಎಂಬಿ)"
ನಂ.26-27, ರಹೇಜಾ ಟವರ್ಸ್, ಈಸ್ಟ್ ವಿಂಗ್ 1ನೇ ಮಹಡಿ, ಎಂ.ಜಿ.ರಸ್ತೆ, ಬೆಂಗಳೂರು-560001.
ದೂ.ಸಂಖ್ಯೆ. 080-25095087. ಇ-ಮೇಲ್: **cs8191@pnb.bank.in**

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟದ ಸೂಚನೆ

ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ (ಎನ್ಫೋರ್ಸ್ಮೆಂಟ್) ನಿಯಮ 2002ರ ನಿಯಮ 8(6) ಷರತ್ತನ್ನು ಓದಿಕೊಂಡಂತೆ ಸೆಕ್ಯೂರಿಟೈಜೇಶನ್ ಅಂಡ್ ರೀಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್ಫೋರ್ಸ್ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ (ಸರ್ಫೇಸಿ) 2002 ಅಡಿಯಲ್ಲಿ ಸ್ಥಿರಾಸ್ತಿಯ ಮಾರಾಟಕ್ಕೆ ಇ-ಹರಾಜಿನ ಮಾರಾಟ ಪ್ರಕಟಣೆ.

ಸಮಸ್ತ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳಗೆ ವಿವರಿಸಿರುವ ಸಾಲ ಪಡೆದವರಿಂದ ಬ್ಯಾಂಕಿಗೆ ಅಡಮಾನ ಮಾಡಿದ ಸ್ಥಿರಾಸ್ತಿಯನ್ನು, ಬ್ಯಾಂಕಿನ ಅಧಿಕೃತ ಅಧಿಕಾರಿಯವರು/ಸಾಲ ನೀಡಿದವರು ರಚನಾತ್ಮಕವಾಗಿ/ಭೌತಿಕವಾಗಿ/ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿದ್ದು ಈ ಸ್ಥಿರಾಸ್ತಿಯನ್ನು ಸಾಲದ ಬಾಕಿಯ ವಸೂಲಾತಿಗಾಗಿ "ಎಲ್ಲಿದೆಯೋ ಹಾಗೆಯೇ ರೀತಿಯಲ್ಲಿ", "ಹೇಗಿದೆಯೋ ಹಾಗೆಯೇ " ಮತ್ತು "ಏನಿದೆಯೋ ಹಾಗೆಯೇ ರೀತಿಯಲ್ಲಿ" ಕೆಳಗೆ ನೀಡಿರುವ ಕೋಷ್ಟಕದಲ್ಲಿ ತಿಳಿಸಿರುವ ದಿನಾಂಕದಂದು ಮಾರಾಟ ಮಾಡಲಾಗುವುದು. ಮೀಸಲು ಬೆಲೆ ರೀತಿಯಲ್ಲಿ ಹಾಗೂ ಮುಂಗಡ ಹಣ ಠೇವಣಿ (ಇಎಂಡಿ) ಈ ಕೆಳಗೆ ನೀಡಿರುವ ಕೋಷ್ಟಕದಲ್ಲಿ ವಿವರಿಸಿದಂತೆ ಆಯಾ ಸ್ವತ್ತುಗಳಿಗೆ ಅನ್ವಯಿಸುತ್ತದೆ.

ಹರಾಜಿನ ದಿನಾಂಕ : 14.12.2026, ಸಮಯ : ಬೆಳಗ್ಗೆ 11.00 ರಿಂದ ಅಹರಾಹ್ನ 03.00

ಕ್ರ. ಸಂ	ಶಾಖೆಯ ಹೆಸರು, ಕಸ್ಟಮರ್ ಐಡಿ, ಖಾತೆ ಹೆಸರು, ಖಾತೆ ಸಂ. ವ್ಯವಹರಿಸುವ ಅಧಿಕಾರಿ ಸಂಪರ್ಕ ಸಂಖ್ಯೆ	ಸ್ಥಿರಾಸ್ತಿಗಳ ವಿವರಣೆ	ಎ) 13(2)ರಡಿ ದಿನಾಂಕ ಬಿ) 13(4)ರಡಿ ದಿನಾಂಕ ಸಿ) ಸ್ವಾಧೀನ ವಿಧ ಡಿ) ಬಾಕಿ ಮೊತ್ತ	ಎ) ಮೀಸಲು ಬೆಲೆ ಬಿ) ಇಎಂಡಿ ಸಿ) ಬಿಡ್ ಗುಣಾಂಕದ ಮೊತ್ತ
1	ಶಾಖಾ ಕಛೇರಿ: ಬೆಂಗಳೂರು ಸಿಟಿ (004100) ಶ್ರೀ ಶ್ರೀನಿವಾಸ್ ಗರುಡನಹಳ್ಳಿ ತಿಮ್ಮೇಗೌಡ **Cust Id - ABO010708** ಖಾತೆ ಸಂ – **0041009300081437** ಮೊ ಸಂ : **9632588100**	ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ಸರ್ವೆ ನಂ.93/1, ಹಳೇ ನಿವೇಶನ ಸಂಖ್ಯೆ 93, ಗಣಕೀಕೃತ ಖಾತೆ ಸಂಖ್ಯೆ 152500403301600357, ಆಸ್ತಿ ಸಂಖ್ಯೆ 253/93/1, ಯಡಿಯೂರು ಗ್ರಾಮ, ಯಡಿಯೂರು ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ, ಕರ್ನಾಟಕ – 572142, ಅಳತೆ: ಪೂರ್ವದಿಂದ ಪಶ್ಚಿಮಕ್ಕೆ 24.0792 ಮೀಟರ್, ಉತ್ತರದಿಂದ ದಕ್ಷಿಣಕ್ಕೆ 155.448 ಮೀಟರ್ ಒಟ್ಟು ವಿಸ್ತೀರ್ಣ 3743.06 ಚದರ ಮೀಟರ್, ನಿರ್ಮಾಣ ಪ್ರದೇಶ 1541.26 ಚದರ ಮೀಟರ್ ಆರ್ಸಿಸಿ ಕಟ್ಟಡ ಮತ್ತು ಉಳಿದ ಖಾಲಿ ನಿವೇಶನ ಇದಕ್ಕೆ ಚಕ್ಕುಬಂಧಿ ಕೆಳಗಿನಂತಿದೆ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಅದೇ ಸರ್ವೆ ನಂಬರ್ ಜಮೀನಿನ ಉಳಿದ ಭಾಗ, ಉತ್ತರದಲ್ಲಿ: ಲಾಹಿ ಸ್ವತ್ತು 2 ಮತ್ತು ದಕ್ಷಿಣದಲ್ಲಿ: ಲಾಹಿ ಸ್ವತ್ತು 3. ಅಡಮಾನದಾರರ ಹೆಸರು: ಶ್ರೀಮತಿ ಶಕುಂತಲ ಎನ್.	ಎ) 20.03.2016 ಬಿ) 25.08.2016 ಸಿ) ಸಾಂಕೇತಿಕ ಡಿ) ರೂ. 11,61,76,993.86 ಜೊತೆಗೆ ಮತ್ತಷ್ಟು ಬಡ್ಡಿ ಮತ್ತು ಇತರ ಶುಲ್ಕಗಳು ಅಂದರೆ 01.10.2026 ರಿಂದ ಅನ್ವಯಿಸುತ್ತದೆ.	ಎ) ರೂ. 6,56,00,000/– ಬಿ) ರೂ. 65,60,000/– ಸಿ) ರೂ. 1,00,000/–
2	ಶಾಖಾ ಕಛೇರಿ: ವಿ ವಿ ಮಾರ್ಕೆಟ್ (085110) ಶ್ರೀ ಬಾಬುಲಾಲ್ ಎಂ ಕಸ್ಟಮರ್ ಐಡಿ **- AMW006140** ಖಾತೆ ಸಂ: – **078500NC00005048** ಮತ್ತು **0785009900000628** **ಮೊಬೈಲ್ ಸಂ: 9632588100**	ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ಮೈಸೂರಿನ ದೇವರಾಜ ಮೊಹಲ್ಲಾದ ಶಿವಯ್ಯನ ಮಠ ಬೀದಿಯಲ್ಲಿರುವ, ಈಗ ಡೋರ್ ನಂ. 362/ಎ, ಡಿ–18/ಎ, 362/1, ಡಿ–21, 362/2, ಡಿ–21/1, 362/3, ಡಿ–21/2, 362/4, ಡಿ–21/3 ಎಂಬ ಸಂಖ್ಯೆಗಳನ್ನು ಹೊಂದಿರುವ ಆಸ್ತಿಯು, ಅಳತೆ ಪೂರ್ವದಿಂದ ಪಶ್ಚಿಮಕ್ಕೆ 14.75 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 48.25 ಅಡಿ ಹೊಂದಿದ್ದು, ಒಟ್ಟು 712 ಚದರ ಅಡಿ ವಿಸ್ತೀರ್ಣವನ್ನು ಒಳಗೊಂಡಿದೆ. ಇದರಲ್ಲಿ ನಾಲ್ಕು ಅಂತಸ್ತುಗಳಿದ್ದು, ನೆಲ ಅಂತಸ್ತು : 500 ಚ.ಅಡಿ (ವಾಣಿಜ್ಯ), ಮೊದಲ ಅಂತಸ್ತು : 500 ಚ.ಅಡಿ (ವಾಸ), ಎರಡನೇ ಅಂತಸ್ತು 500 ಚ.ಅಡಿ (ವಾಸ) ಮತ್ತು ಮೂರನೇ ಅಂತಸ್ತು : 500 ಚ.ಅಡಿ (ವಾಸ) ವಿಸ್ತೀರ್ಣವನ್ನು ಹೊಂದಿವೆ. ಈ ಆಸ್ತಿಯು ಈ ಕೆಳಗಿನಂತೆ ಚಕ್ಕುಬಂಧಿಗಳನ್ನು ಹೊಂದಿದೆ: ಪೂರ್ವಕ್ಕೆ – ಖಾಸಗಿ ಆಸ್ತಿ; ಪಶ್ಚಿಮಕ್ಕೆ – ಶಿವಯ್ಯನ ಮಠ ರಸ್ತೆ; ಉತ್ತರಕ್ಕೆ – ಕನ್ಸರ್ವೆನ್ಸಿ ಗಲ್ಲಿ (ಸಾರ್ವಜನಿಕ ಹಾದಿ); ಮತ್ತು ದಕ್ಷಿಣಕ್ಕೆ – ಎಂ.ಬಿ. ರೂಪೇಶ್ ಅವರ ಆಸ್ತಿ.	ಎ) 04.11.2025 ಬಿ) 05.02.2026 ಸಿ) ಸಾಂಕೇತಿಕ ಡಿ) ರೂ. 39,86,857.05 ಜೊತೆಗೆ ಮತ್ತಷ್ಟು ಬಡ್ಡಿ ಮತ್ತು ಇತರ ಶುಲ್ಕಗಳು ಅಂದರೆ 01.11.2026 ರಿಂದ ಅನ್ವಯಿಸುತ್ತದೆ.	ಎ) ರೂ. 1,26,09,000/– ಬಿ) ರೂ. 12,60,900/– ಸಿ) ರೂ. 1,00,000/–
3	ಶಾಖಾ ಕಛೇರಿ: ವಿ ವಿ ಮಾರ್ಕೆಟ್ (085110) ಶ್ರೀ. ಕಮಲಾ ಬಿ ಕಸ್ಟಮರ್ ಐಡಿ – **BEE004762** ಖಾತೆ ಸಂ– **078500NC00005039** ಮತ್ತು **0785009900000637** **ಮೊಬೈಲ್ ಸಂ: 9632588100**	ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ಮೈಸೂರಿನ ದೇವರಾಜ ಮೊಹಲ್ಲಾದ ಶಿವಯ್ಯನ ಮಠ ಬೀದಿಯಲ್ಲಿರುವ, ಹಿಂದೆ ಆಸ್ತಿ ಸಂಖ್ಯೆ 362/ಎ ಎಂದು ಗುರುತಿಸಲ್ಪಟ್ಟಿದ್ದು, ಈಗ ಡೋರ್ ನಂ. 362/5, ಡಿ–21/4, 362/6, ಡಿ–21/5, 362/7, ಡಿ–21/6, 362/8, ಡಿ–21/7 ಎಂದು ಕರೆಯಲ್ಪಡುವ ಆಸ್ತಿಯು, ನೆಲ ಅಂತಸ್ತು (ದಾರಿ/ಪ್ಯಾಸೇಜ್ ಸೇರಿದಂತೆ) ಮತ್ತು ಮೊದಲ ಅಂತಸ್ತನ್ನು ಒಳಗೊಂಡಿದೆ. ಅಳತೆ ಇದು ಪೂರ್ವದಿಂದ ಪಶ್ಚಿಮಕ್ಕೆ 16.9 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 48.30 ಅಡಿ ಹೊಂದಿದೆ. ಈ ಆಸ್ತಿಯು ಈ ಕೆಳಗಿನಂತೆ ಚಕ್ಕುಬಂಧಿಗಳನ್ನು ಹೊಂದಿದೆ: ಪೂರ್ವಕ್ಕೆ – ಖಾಸಗಿ ಆಸ್ತಿ; ಪಶ್ಚಿಮಕ್ಕೆ – ಶಿವಯ್ಯನ ಮಠ ರಸ್ತೆ; ಉತ್ತರಕ್ಕೆ – ಶ್ರೀ ಎಂ. ಬಿ. ಮಹೇಶ್ ಅವರ ಪಾಲಿಗೆ ಹಂಚಿಕೆಯಾದ ಆಸ್ತಿಯ ಭಾಗ; ಮತ್ತು ದಕ್ಷಿಣಕ್ಕೆ – ಶ್ರೀ ಎಂ. ವಿ. ವೆಂಕಟರಂಗಶೆಟ್ಟಿ ಅವರಿಗೆ ಸೇರಿದ ಆಸ್ತಿ. ಇದೊಂದು ಆರ್ಸಿಸಿ ಭಾವಣಿ ಹೊಂದಿರುವ ಕಟ್ಟಡವಾಗಿದ್ದು, ನೆಲ ಅಂತಸ್ತಿನಲ್ಲಿ 4 ಅಂಗಡಿಗಳನ್ನು ಮತ್ತು ಮೇಲಿನ ಅಂತಸ್ತಿನಲ್ಲಿ ವಸತಿ ಭಾಗವನ್ನು ಒಳಗೊಂಡಿದೆ. ಒಟ್ಟು ನಿರ್ಮಿತ ವಿಸ್ತೀರ್ಣವು 736 + 736 ಚದರ ಅಡಿಗಳಷ್ಟಿದ್ದು, ವಿದ್ಯುತ್, ನೀರು ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಹೊಂದಿದೆ.	ಎ) 13.11.2025 ಬಿ) 05.02.2026 ಸಿ) ಸಾಂಕೇತಿಕ ಡಿ) ರೂ.46,73,445.44 ಜೊತೆಗೆ ಮತ್ತಷ್ಟು ಬಡ್ಡಿ ಮತ್ತು ಇತರ ಶುಲ್ಕಗಳು ಅಂದರೆ 01.11.2026 ರಿಂದ ಅನ್ವಯಿಸುತ್ತದೆ.	ಎ) ರೂ. 1,44,42,300/– ಬಿ) ರೂ. 14,44,230/– ಸಿ) ರೂ. 1,00,000/–

ನಿಯಮಗಳು ಮತ್ತು ನಿಬಂಧನೆಗಳು

ಮಾರಾಟವು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರಲ್ಲಿ ಸೂಚಿಸಲಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ ಮತ್ತು ಕೆಳಗಿನ ಮುಂದಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ:
1. ಆಸ್ತಿಗಳನ್ನು "ಎಲ್ಲಿ ಆಧಾರವಿದೆಯೋ ಹಾಗೆ" ಮತ್ತು "ಯಾವುದು ಆಧಾರವಿದೆಯೋ ಹಾಗೆ" ಮತ್ತು "ಯಾವುದೇ ಆಧಾರವಿದೆಯೋ" ಎಂದು ಮಾರಾಟ ಮಾಡಲಾಗುತ್ತಿದೆ.
2. ಮೇಲೆ ನೀಡಿರುವ ಷೆಡ್ಯೂಲ್ನಲ್ಲಿ ನಮೂದಿಸಲಾದ ಭದ್ರತಾ ಆಸ್ತಿಗಳ ವಿವರಗಳನ್ನು ಅಧಿಕೃತ ಅಧಿಕಾರಿಯು ತಮ್ಮಲ್ಲಿರುವ ಮಾಹಿತಿಯ ಮೇರೆಗೆ ಅತ್ಯುತ್ತಮವಾಗಿ ತಿಳಿಸಿರುತ್ತಾರೆ; ಆದರೆ, ಈ ಪ್ರಕಟಣೆಯಲ್ಲಿ ಕಂಡು ಬರುವ ಯಾವುದೇ ದೋಷ, ತಪ್ಪು ಹೇಳಿಕೆ ಅಥವಾ ಲೋಪಕ್ಕೆ ಅಧಿಕೃತ ಅಧಿಕಾರಿಯು ಜವಾಬ್ದಾರರಾಗಿರುವುದಿಲ್ಲ.
3. ಮಾರಾಟದ ದಿನದಂದು ಅಥವಾ ಮಾರಾಟದ ನಂತರದ ಮುಂದಿನ ಕೆಲಸದ ದಿನದೊಳಗೆ, ಇಎಂಡಿ ಮೊತ್ತವನ್ನೂ ಒಳಗೊಂಡಂತೆ ಮಾರಾಟದ ಬೆಲೆಯ 25% ರಷ್ಟು ಮೊತ್ತವನ್ನು ಪಾವತಿಸಲು ವಿಫಲವಾದರೆ, ನೀವು ಠೇವಣಿ ಇರಿಸಿದ ಮೊತ್ತವನ್ನು ಬ್ಯಾಂಕ್ ಯಾವುದೇ ಮುನ್ಸೂಚನೆಯಿಲ್ಲದೆ ಮುಟ್ಟುಗೋಲು ಹಾಕಿಕೊಳ್ಳುತ್ತದೆ.
4. ಮಾರಾಟ/ಬಿಡ್ ಬೆಲೆಯ ಜೊತೆಗೆ, ವಿದ್ಯುತ್ ಬಿಲ್ ಬಾಕಿ, ಸೊಸೈಟಿ ಶುಲ್ಕದ ಬಾಕಿ, ಆಸ್ತಿ ತೆರಿಗೆ ಬಾಕಿ ಇತ್ಯಾದಿ ಏನಾದರೂ ಇದ್ದರೆ, ಅವುಗಳ ನೈಜ ಮೊತ್ತವನ್ನು ಯಶಸ್ವಿ ಬಿಡ್ದಾರರೇ ಭರಿಸಬೇಕಾಗುತ್ತದೆ.
5. ದಿನಾಂಕ: 14.12.2026 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವೆಬ್ಸೈಟ್ **https://baanknet.com** ನಲ್ಲಿ ಒದಗಿಸಲಾದ ಇ-ಹರಾಜು ವೇದಿಕೆಯ ಮೂಲಕ ಕೆಳಗೆ ಸಹಿ ಮಾಡಿದವರು ಮಾರಾಟವನ್ನು ಮಾಡುತ್ತಾರೆ.
6. **https://baanknet.com** ವೆಬ್ಸೈಟ್ನಲ್ಲಿ ಒದಗಿಸಲಾದ ಇ-ಹರಾಜು ವೇದಿಕೆಯ ಮೂಲಕ ಸಹಿ ಮಾಡಿದವರಿಂದ ಈ ಮಾರಾಟವನ್ನು ನಡೆಸಲಾಗುವುದು. ಇ-ಹರಾಜಿನ ಸೇವಾ ಪೂರೈಕೆದಾರರಾದ **M/s PSB Alliance Pvt. Ltd.** ಒದಗಿಸಲಿದೆ. ಇವರ ನೋಂದಾಯಿತ ಕಚೇರಿಯು ಈ ಕೆಳಗಿನ ವಿಳಾಸದಲ್ಲಿದೆ; ಘಟಕ 1, 3ನೇ ಮಹಡಿ, ವಿಐಎಎಸ್ ಕಮರ್ಷಿಯಲ್ ಟವರ್, ವಡಲಾ ಟ್ರಕ್ ಟರ್ಮಿನಲ್ ಹತ್ತಿರ, ವಡಲಾ ಈಸ್ಟ್, ಮುಂಬೈ-400037 (ಹೆಲ್ಪ್ಡೆಸ್ಕ್ ಸಂಖ್ಯೆ: +91 8291220220, ಇಮೇಲ್ ಐಡಿ: **support.baanknet@psballiance.com).** ಆಸಕ್ತ ಬಿಡ್ದಾರರು/ಖರೀದಿದಾರರು ಇ-ಹರಾಜು ಸೇವಾ ಪೂರೈಕೆದಾರರ ವೆಬ್ಸೈಟ್ **https://baanknet.com** ನಲ್ಲಿ ನಡೆಯುವ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬೇಕಾಗುತ್ತದೆ. ಈ ಸೇವಾ ಪೂರೈಕೆದಾರರು ಪೋರ್ಟಲ್ನಲ್ಲಿ ಇ-ಹರಾಜಿನ ಕುರಿತು ಆನ್ಲೈನ್ ಪ್ರಾತ್ಯಕ್ಷಿಕೆ/ತರಬೇತಿಯನ್ನೂ ಸಹ ಒದಗಿಸುತ್ತಾರೆ.

2002ರ ಸರ್ಫೇಸಿ ಕಾಯ್ದೆಯ ನಿಯಮ 8(6)ರ ಅಡಿಯಲ್ಲಿ ಶಾಸನಬದ್ಧ 15/30 ದಿನಗಳ ಮಾರಾಟದ ಸೂಚನೆ

ಸ್ಥಳ : ಬೆಂಗಳೂರು
ದಿನಾಂಕ : 08.11.2026
ಸಹಿ/– ಅಧಿಕೃತ ಅಧಿಕಾರಿ & ಮುಖ್ಯ ಪ್ರಬಂಧಕರು
ಪಂಜಾಬ್ ನ್ಯಾಷನಲ್ ಬ್ಯಾಂಕ್ (ಸೆಕ್ಯೂರ್ಡ್ ಕ್ರೆಡಿಟರ್)